# ಅರಣ್ಯ ಸಂಪತ್ತು ನಶಿಸಿ ಹೋಗದಂತೆ ತಡೆಯಿರಿ-ಚಿದಂಬರನಾಥ





(ಲೋಕದರ್ಶನ ವರದಿ)

ಕೊಪ್ಪಳ ಫೆ. 13: ದೇಶದಲ್ಲಿ ಮಳೆ,ಬೆಳೆ ಸುರಕ್ಷಿತವಾಗಿ ಶ್ರಮಿಸಲು ಅರಣ್ಯ ಸಂಪತ್ತು ಬಹಳ ಉಪಯುಕ್ತವಾದದು. ಆದರೆ ನೆಲ,ಜಲ ಅರಣ್ಯ ಸಂಪತ್ತು ನಶಿಸಿಹೋಗದಂತೆ ತಡೆಯುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಎಂದು ಸಂಪರ್ಕ ಸಂಸ್ಥೆಯ ಯೋಜನಾಧಿಕಾರಿಗಳಾದ ಚಿಧಂಬರನಾಥ ರವರು ಅಭಿಪ್ರಾಯಪಟ್ಟಿದ್ದರು.

ಕೊಪ್ಪಳ ಸಮೀಪ ಬಿಕನಹಳ್ಳಿ ಗ್ರಾಮದಲ್ಲಿ ಕಪಾರ್ಟ ಧಾರವಾಡ ಯೋಜನೆ ನೆರವಿನಲ್ಲಿ ಕೊಪ್ಪಳದ ಸಂಪರ್ಕ ಸಂಸ್ಥೆಯ ಆಯೋಜಿಸಿದ್ದ ಜಲನಯನ ಯೋಜನೆಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಹಾಗೂ ಮುಖ್ಯಾ ಆತಿಥಿಗಳಾಗಿ ಆಗಮಿಸಿ ಶಾಲೆಯ ಮುಖ್ಯೊಪಾಧ್ಯಾಯರಾದ ಶಾಂತವೀರಪ್ಪ ಕುರ್ತು ಕೋಟಿ ಮಾತನಾಡಿ ಈಗಾಗಲೇ ಗ್ರಾಮದಲ್ಲಿ 5 ಮಹಿಳಾ ಸ್ವಸಹಾಯ ಸಂಘವು ಗ್ರಾಮದಲ್ಲಿ ಅಭಿವೃದ್ದಿ ಕಾರ್ಯದಲ್ಲಿ ನಿರತವಾಗಿದ್ದು, ಮಹಿಳೆಯರು ಇನ್ನು ಮುಂದೆ ಇಂಜರಿಕೆ ಸ್ವಭಾವ ಬಿಟ್ಟು ಯೋಜನೆಯಲ್ಲಿ ಭಾಗವಹಿಸಿ ಯೋಜನೆ ಯಶಸ್ವಿಗೊಳಿಸಲು ಶ್ರಮಿಸಬೇಕು ಎಂದರು.

ಹಾಗೂ ಸಂಪರ್ಕ ಸಂಸ್ಥೆಯ ಸಿಬ್ಬಂದಿಗಳಾದ ರಾಜಶೇಖರ ಮಾತನಾಡಿ ಅರಣ್ಯ ಸಂಪತ್ತು ನಾಶವಾಗುವುದರಿಂದ ಭೂಮಿಯ ಫಲವತ್ತತೆಯ ಮಣ್ಣು ಕೊಚ್ಚಿಕೊಂಡು ಹೋಗುತ್ತದೆ. ಆದರೆ ಅದು ಕೊಚ್ಚಿ ಹೋಗದಂತೆ ತಡೆಯಲು ಅರಣ್ಯ ಸಂಪತ್ತು ಬಹಳ ಮುಖ್ಯವಾದದು. ಆದರೆ ಅವುಗಳನ್ನು ಬೆಳಸಿ, ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಸಂಘದ ಸದಸ್ಯರಿಗೂ ಹಾಗೂ ಗ್ರಾಮದ ಪ್ರಮುಖರಿಗೂ ಮನವಿ ಮಾಡಿಕೊಂಡರು.

ನಂತರ ಶಂಕ್ರಪ್ಪ ಬೆಳವಿನಾಳ ಇವರ ಹೊಲದಲ್ಲಿ ಕೃಷಿ ಹೊಂಡ ನಿರ್ಮಿಸಲು ಈರಣ್ಣ ಸೂಗಾರ, ಮತ್ತು ಶಂಕರಗೌಡ ಮಾಲಿ ಪಾಟೀಲ್‌ರವರು ಗುದ್ಲೆ ಪೂಜೆ ಮುಖಾಂತರ ಚಾಲನೆ ನೀಡಿದರು. ಸಮಾರಂಭದ ಉದ್ಘಾಟನೆಯನ್ನು ಪಶು ವೈದ್ಯರಾದ ಈರಣ್ಣ ಸೂಗಾರ ನೆರವೇರಿಸಿ ದರು. ಸಮಾರಂಭದಲ್ಲಿ ಭೀಮರೆಡ್ಡಿ ಬಿಸರಹಳ್ಳಿ, ಶಾಂತ ವೀರಪ್ಪ ಕುರ್ತುಕೋಟಿ ಕುಬೇರಗೌಡ ಪೊಲೀಸ್ ಪಾಟೀಲ್, ಗವಿಸಿದ್ದಪ್ಪ ಹಳ್ಳಿ, ಮಲ್ಲಪ್ಪ ಕುರಿ, ಶಂಕರಗೌಡ ಮಾಲಿ ಪಾಟೀಲ್, ಹಾಗೂ ಸಂಪರ್ಕ ಸಂಸ್ಥೆಯ ಸಿಬ್ಬಂದಿಗಳಾದ ಜಯಶೀಲನ್, ನಿರ್ಮಲಾ, ಜಯಂತಿ,ಅಕ್ಕಮ್ಮ, ರಾಜಶೇಖರ ಮುಂತಾದವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾರ್ಥನೆ ಯನ್ನು ನೇತ್ರಾವತಿ, ನೀಲಮ್ಮ,ಗಂಗಮ್ಮ, ಶ್ವೇತಾ ಹಾಡಿದರೆ, ಶಿವಪುತ್ರಪ್ಪ ತಳವಾರ ಸ್ವಾಗತಿಸಿದರು. ಬಸವರೆಡ್ಡಿ ಬಿಸರಹಳ್ಳಿ ನಿರೂಪಿಸದರೇ, ರಾಜಶೇಖರ ಕೊನೆಯಲ್ಲಿ ವಂದಿಸಿದರು.

# ಇಂದು ಕೊಪ್ಪಳ ತಾಲೂಕಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಸಮಾರಂಭ

(ಲೋಕದರ್ಶನ ವರದಿ)

ಕೊಪ್ಪಳ ಫೆ. 13: ಕೊಪ್ಪಳ ತಾಲೂಕ ಕನ್ನಡ ಸಾಹಿತ್ಯ ಪರಿಷತ್ ಕೊಪ್ಪಳ ಕೊಪ್ಪಳ ತಾಲೂಕ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವು ದಿ.14 ರಂದು ಸಾಹಿತ್ಯ ಭವನದಲ್ಲಿ ಜರುಗುವುದು.

ದಿ.14 ರಂದು ಶನಿವಾರ ಬೆಳಿಗ್ಗೆ 8.15 ಘಂಟೆಗೆ ಧ್ವಜಾರೋಹಣ ರಾಷ್ಟ್ರಧ್ವಜವನ್ನು ಸಂಗಣ್ಣ ಕರಡಿ ಅಧ್ಯಕ್ಷರು ಸ್ವಾಗತ ಸಮಿತಿ ನರವೇರಿಸಲಿದ್ದಾರೆ.ಪರಿಷತ್ತಿನ ಧ್ವಜವನ್ನು ರಾಜಶೇಖರ ಅಂಗಡಿ ಅಧ್ಯಕ್ಷರು ವಕೀಲರ ಸಂಘ,ನಿರೂಪಣೆಯನ್ನು ವೀರಣ್ಣ ವಾಲಿ,ರವಿಕಾಂತನವರ, ವಂದನಾರ್ಪಣೆಯನ್ನು ಈರಣ್ಣ ಕುಂಬಾರ ಮಾಡುವರು.

ಗೋಷ್ಠಿ:1 ಮಧ್ಯಾಹ್ನ 12.00 ಗಂಟೆಗೆ ಜಾನಪದ ಗೀತೆಗಳ ಅವಲೋಕನ ಮತ್ತು ಪ್ರಾತ್ಯಕ್ಷಿಕೆ ಇದರ ಅಧ್ಯಕ್ಷತೆಯನ್ನು ಡಾ|| ಅರ್ಜುನ ಗೊಳಸಂಗಿ ಗದಗ,ಉಪ ನ್ಯಾಸ ಬಿ.ಕೆ.ಎಸ್.ವರ್ಧನ್ ಹುಬ್ಬಳ್ಳಿ, ಬಸವರಾಜ ಹೂಗಾರ ಪ್ರಾತ್ಯಕ್ಷಿಕ ಲಾವಣಿ ರೇವಣ್ಣಪ್ಪ ಅಬ್ಬಿಗೇರಿ ಕೋಳೂರು, ದೇವಪ್ಪ ಹರಿಜನ ಮಾದಿನೂರು,ಗೀಗೀಪದ ಅಂಗಡಿ ಧಾರವಾಡ,ಜಾಗತೀಕರಣ ಮತ್ತು ವಿದ್ಯಾರ್ಥಿಗಳು ಅಮರೇಗೌಡ ಗೋನ್ವಾರ, ಉಪಸ್ಥಿತರು ಡಾ|| ಆರ್.ಎಂ.ಪಾಟೀಲ, ಬಸವರಾಜ ಶೀಲವಂತರ,ಮಂಜುನಾಥ ಭಟ್,ಭೀಮರಾಯ ಹದ್ದಿನಾಳ,ಸೋಮರಡ್ಡಿ ಅಳವಂಡಿ,ವೀರಣ್ಣ ನಿಂಗೋಜಿ,ನಿರೂಪಣೆಯನ್ನು ರಾಜಾಭಕ್ಷಿ ಹೆಚ್.ವಿ, ಶ್ರೀನಿವಾಸ ಚಿತ್ರಗಾರ,ವಂದನಾರ್ಪಣೆಯನ್ನು ಸಜ್ಜಾದ್ ಹುಸೇನ್ ರವರು ಮಾಡಲಿದ್ದಾರೆ.

ಸಂಜೆ 5.30ಕ್ಕೆ ವಿಶೇಷ